# ಇನ್ನು ಪುಟ್ಟಿಸದಿರಯ್ಯ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 70.
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 99.
3. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 08.
4. **Note:** This song is not available in the books of Prof. S.K. Ramachandra Rao and also in the books of Gorebala Hanumantha Rayaru.
5. **Note:** Lyrics given without highlights are as per Ref. 1. The wordings in Ref. 2 are different and are given in green highlights. The wordings in Ref. 3 are same as in Ref. 2. The wordings in Ref. 2 seem to be more apt.
6. **Note:** Ankita is different in both these books. We have considered Ref.2 as standard and taken that Ankita for listing.
7. **Note:** Singer has followed lyrics as in Ref. 1.

ರಾಗ: ರೇಗುಪ್ತಿ ತಾಳ: ಝಂಪೆ

ಇನ್ನು ಪುಟ್ಟಿಸದಿರಯ್ಯ, ಪುಟ್ಟಿಸಿದಕೆ ಪಾಲಿಸಯ್ಯ
ನನ್ನ ದಯದಿ ತಾರಿಸಯ್ಯ || ಪ ||

ನಿನ್ನ ಪಾದಾಂಭುಜವ ನಂಬಿದೆನು ರಘುಪತಿಯೆ
ಬೆನ್ನುಬಿದ್ದೆನು ಭವಬಂಧನವ ಬಿಡಿಸೊ || ಅಪ ||

ಅಮರೇಂದ್ರವಂದಿತನೆ ಅನಂತಮಹಿಮನೆ
ಕಮಲಸಖತೇಜಕರನೆ
ಅಮಿತಲೋಹಿತನೆ ನೀ ಕಾಮಿತವರದನೆ
ವಿಮಲ ವಿಭೀಷಣಗೊಲಿದ ದಯದಿಂದಲೆನ್ನ || 1 ||

ಅಜಮಿಳ ಅಂಬರೀಷ ಅಕ್ರೂರ ನಾರದಗೆ
ಗಜರಾಜ ಗಿರಿಜೇಶಗೆ

ಅಜ ಧ್ರುವ ಅರ್ಜುನಗೆ ನಿಜಭಕ್ತ ಪ್ರಹ್ಲಾದಗೆ
ದ್ವಿಜಗೆ ರುಕ್ಮಾಂಗದಗೆ ಒಲಿದ ದಯದಿಂದಲೆನ್ನ || 2 ||

ಎಂದೆಂದಿಗೆ ನಿನ್ನ ಪಾದವೆನಗೆ ನೆಲೆಯಾಯಿತು
ಅಂದು ನಿನ್ನ ಪಾದಭಜನೆ
ಎಂದಿಗೆ ನಿನ್ನ ಪಾದ ಪಿಡಿಸಿ ಸಲಹೋ ಸ್ವಾಮಿ
ಅಂದು ಅಂಜನೆಕಂದಗೊಲಿದ ದಯದಿಂದಲೆನ್ನ || 3 ||

ಅವರಂತೆ ನಾನಲ್ಲ ಅವರ ದಾಸರ ದಾಸ
ಸವರಿ ಬಿಸುಟೆನ್ನ ದೋಷ
ಪಾವನ್ನ ಮಾಡಯ್ಯ ಪುಂಡರೀಕವರದನೆ
ಅವಸರಕೆ ದ್ರೌಪದಿಗೆ ಒಲಿದ ದಯದಿಂದಲೆನ್ನ || 4 ||

ಅಂತರಂಗದುಬ್ಬಸವು ನಿನಗೆ ಉಸಿರುವೆ ನಾನು
ಸಂತಸದಿ ಗೌತಮನ ಸತಿ ಸಲಹಿದೆ
ಸಂತತ ನಿನ್ನ ಭಕ್ತರನು ಪಾಲಿಸುವ
ಕಂತುಪಿತ ನಮ್ಮ ಸಿರಿ ಪುರಂದರ ವಿಠಲ || 5 ||

**Note:** Lyrics given below are as per Ref. 2. These wordings seem to be more apt.

ರಾಗ: ರೇಗುಪ್ತಿ ತಾಳ: ಅಟ

ಇನ್ನು ಪುಟ್ಟಿಸದಿರಯ್ಯ ಪುಟ್ಟಿಸಿದಕೆ ಪಾಲಿಸಯ್ಯ
ಎನ್ನ ದಯದಿ ಪಾಲಿಸಯ್ಯ || ಪ ||

ನಿನ್ನ ಚರಣಾಂಬುಜವ ನಂಬಿದೆನೊ ಶ್ರೀ ಹರಿಯೆ
ಬನ್ನ ಬಿದ್ದೆನು ಭವಬಂಧನವ ಬಿಡಿಸಯ್ಯ || ಅಪ ||

ಅಮರೇಂದ್ರವಂದಿತನೆ ಅನಂತಮಹಿಮನೆ
ಕಮಲಸಖಾನಂತಕರನೆ

ಕಮಲಾಯತಾಂಬಕನೆ ಕಾಮಿತದಾಯಕನೆ
ವಿಮಲ ಗುಣ ವಿಭೀಷಣಗೆ ಒಲಿದ ದಯದಿಂದಲೆನ್ನ ॥ ೧ ॥

ಅಜಮಿಳ ಅಂಬರೀಷ ಅಕ್ರೂರ ವಿದುರಗೆ
ಗಜರಾಜ ಗಿರಿಜೇಶಗೆ
ನಿಜಭಕ್ತ ಪ್ರಹ್ಲಾದ ಅಜ ಧ್ರುವ ಅರ್ಜುನಗೆ
ದ್ವಿಜ ಸುತ ರುಕ್ಮಾಂಗದರಿಗೊಲಿದ ದಯದಿಂದಲೆನ್ನ ॥ ೨ ॥

ಅವರಂತೆ ನಾನಲ್ಲ ಅವರ ದಾಸರ ದಾಸ
ಸವರಿ ಬಿಸುಟೆನ್ನ ದೋಷ
ಪವಿತ್ರನ್ನ ಮಾಡಯ್ಯ ಪುಂಡಲೀಕ ವರದನೆ
ಅವಸರಕೆ ದ್ರೌಪದಿಗೆ ಒಲಿದ ದಯದಿಂದಲೆನ್ನ ॥ ೩ ॥

ಎಂದೆಂದು ನಿನ್ನ ಪಾದವೆನಗೆ ನೆಲೆಯಾಯಿತು
ಎಂದೆಂದು ನಿನ್ನ ನಾಮಭಜನೆ
ಎಂದೆಂದು ನೀಯೆನ್ನ ಬಿಡದೆ ಪಾಲಿಸೊ ಸ್ವಾಮಿ
ಅಂದು ಅಂಜನೆಕಂದನಿಗೆ ಒಲಿದ ದಯದಿಂದಲೆನ್ನ ॥ ೪ ॥

ಅಂತರಂಗದುಬ್ಬಸವ ಅಯ್ಯೋ ನಿನಗುಸಿರುವೆನು
ಚಿಂತೆಗಳ ಪರಿಹರಿಸೊ
ಸಂತತ ಪಾಲಿಸೊ ಪುರಂದರ ವಿಠಲನೆ
ಚಿಂತಿಪ ಗೌತಮನ ಸತಿಗೆ ಒಲಿದ ದಯದಿಂದಲೆನ್ನ ॥ ೫ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ತಾರಿಸು** = ದಾಟಿಸು, ಉದ್ಧಾರ ಮಾಡು, ಪಾರುಗಾಣಿಸು

**ಬೆನ್ನು ಬೀಳು** = ಮೊರೆಹೋಗು

**ಅಮರೇಂದ್ರ** = ದೇವೇಂದ್ರ.

**ಕಮಲಸಖ** = ಸೂರ್ಯ

**ಕಮಲಾಸಖಾನಂತಕರನೆ** = ಸೂರ್ಯನಂತೆ ಅನಂತ ಕಿರಣಗಳುಳ್ಳವನೆ

**ಅಂಬರೀಷ :—** ಸೂರ್ಯವಂಶದ ವೈವಸ್ವತ ಮನುವಿನ ಮಗನಾದ ನಾಭಾಗನ ಮಗನು. ಇವನು ಭಕ್ತಾಗ್ರೇಸರ; ಏಕಾದಶಿ ವ್ರತ ಪರಾಯಣನು.  ದುರ್ವಾಸ ಋಷಿಗಳು ಇವನ ವ್ರತ ಕೆಡಿಸಬೇಕೆಂದು ಬಂದರು, ವಿಷ್ಣುವಿನ ಚಕ್ರಾಯುಧಕ್ಕೆ ಹೆದರಿ ದೇವಲೋಕಕ್ಕೆ ಓಡಿ ಹೋದರು. ಅಂಬರೀಷನನ್ನು ಮೊರೆಹೊಕ್ಕು ಚಕ್ರಘಾತದಿಂದ ಉಳಿದುಕೊಂಡರು. (ಭಾಗವತ ೯-೪).

**ವಿದುರ :—** ವಿಚಿತ್ರವೀರ್ಯನ ಹೆಂಡತಿಯಾದ ಅಂಬಿಕೆಯ ದಾಸಿಯ ಮಗ; ವೇದವ್ಯಾಸರ ಅನುಗ್ರಹದಿಂದ ಜನಿಸಿದವ; ಯಮನ ಅಂಶಸಂಭೂತ; ಮಹಾವಿಷ್ಣು ಭಕ್ತ ಮತ್ತು ಜ್ಞಾನಿ. ಶ್ರೀಕೃಷ್ಣನು ಸಂಧಾನಕ್ಕಾಗಿ ಹಸ್ತಿನಾವತಿಗೆ ಹೋದಾಗ, ದುರ್ಯೋಧನನ ಅರಮನೆಯನ್ನು ಬಿಟ್ಟು ಈತನ ಆತಿಥ್ಯ ಪಡೆದನು. ಈತ ಪಾಂಡವರಿಗೆ ಯಾವಾಗಲೂ ಅನುಕೂಲನಾಗಿದ್ದ. (ಮಹಾಭಾರತ - ಆದಿಪರ್ವ).

**ಗಿರಿಜೇಶಗೆ ಒಲಿದ :—** ರುದ್ರದೇವರಿಗೆ ವಿಷ್ಣು ಒಲಿದ ಹಲವಾರು ಸಂದರ್ಭಗಳಿವೆ. (ಭಸ್ಮಾಸುರನ ಕಥೆ; ಬಾಣಾಸುರನ ಕಥೆ ಇವು ಈ ವಿಷಯವನ್ನು ತಿಳಿಸಿ ಹೇಳುತ್ತವೆ.)

**ಅರ್ಜುನ** = ಚಂದ್ರವಂಶದ ಪಾಂಡುರಾಜ-ಕುಂತಿಯರ ಮಗ. ದೇವೇಂದ್ರನ ಅಂಶದಿಂದ ಹುಟ್ಟಿದವ. ಪ್ರಸಿದ್ಧ ಕೃಷ್ಣಭಕ್ತ; ಇವನ ಕಾರಣದಿಂದಲೇ ಭಗವದ್ಗೀತೆ ಹುಟ್ಟಿತು.

**ದ್ವಿಜಸುತ** = ಕುಚೇಲ (ಸುದಾಮ).

**ಪುಂಡರೀಕ** = ಒಬ್ಬ ಬ್ರಾಹ್ಮಣ. ಸಕಲಶಾಸ್ತ್ರವಿಶಾರದ. ನಾರಾಯಣನ ಸರ್ವೋತ್ತಮತ್ವದ ವಿಷಯವಾಗಿ ನಾರದನ ಕೂಡ ವಾದಮಾಡಿದನು. ಇವನು ಅಂಬರೀಷನ ಗೆಳೆಯ. ಅಧರ್ಮಾಚರಣೆಯಿಂದ ಪತಿತನಾಗಿ ಪ್ರಾಯಶ್ಚಿತ್ತ ಹೊಂದಿ, ಮುಂದೆ ಪರಮಾತ್ಮನ ಅಪರೋಕ್ಷ ಜ್ಞಾನದಿಂದ ಮೋಕ್ಷ ಪಡೆದನು. (ಭಾರತ ಅನುಶಾಸನ, ೧೮೩).

**ಅವಸರ** = ಪ್ರಸಂಗ.

**ಅಂಜನೆ ಕಂದ** = ಹನುಮಂತ.

**ಉಬ್ಬಸ** = ಸಂಕಟ.

**ಗೌತಮನ ಸತಿ** = ಅಹಲ್ಯೆ.

**Classification:** Keerthane
**Ankita:** purandara vittala
**Location:** NA
**Category:** Pooja Tatva, binnaha

**Sub-Category:** huttu, daya, rama, bhava, indra, Narayana, Vishnu, Ananta, padma, surya, Vibhishana, ajamila, ambarisha, prahallada, brahmana, Dhruva, brahma, pandava, arjuna, rukmangada, bhajane, hanuma, pundarika, draupadi, olume, goutama, rushi, muni, ahalya, manmatha,
**Pravachana:** NA
**Explanation:** NA